ಅವರು ಕಣ್ತುಂಬಿಕೊಂಡಿದ್ದಾರೆ. ಅಪರೂಪಕ್ಕೆ ಚಿತ್ರ ತೆಗೆದು ಫೇಸ್‌ಬುಕ್ ಪುಟಗಳಲ್ಲಿ ಹಂಚಿಕೊಡಿದ್ದಾರೆ. ಈಗಲೂ ಅವನ್ನೆಲ್ಲ ನೆನೆಯುತ್ತ ನಿಂತವರು ತಮ್ಮ ಕಣ್ಣೆದುರು ಒಂದು ರುದ್ರಭಯಾವಹ ದೃಶ್ಯವನ್ನು ಕಂಡು ನಡುಗಿಹೋದರು.

ಕನಸು ಮನಸಿನಲ್ಲೂ ಊಹಿಸಲಾಗದ ದೃಶ್ಯಾವಳಿಗಳನ್ನು ಕಂಡು ರಾನಭ 'ಅಯ್ಯೋ ದೇವರೇ' ಎಂದರು. ತಮ್ಮೆದುರಿಗೇ ಗುಡ್ಡವೊಂದು ಕುಸಿದು ಮಣ್ಣಿನ ಮಹಲೊಂದು ಬಿದ್ದಿತ್ತೋ ಎಂಬಂತೆ ಧರಾಶಾಯಿಯಾದುದನ್ನು, ಆ ಅಬ್ಬರ, ಕೋಲಾಹಲದೊಂದಿಗೆ ಮಣ್ಣಿನ ಮಹಾರಾಶಿ ವಾಹನಗಳನ್ನು, ಜನರನ್ನು, ಗುಡಿಸಲುಗಳನ್ನು, ಬಡಪ್ರಾಣಿಗಳನ್ನು ತರಗೆಲೆಯಂತೆ ಗಂಗಾವಳಿ ನದಿಯತ್ತ ತಳ್ಳಿಕೊಂಡು ಸಾಗಿದುದನ್ನು ಅವರು ಆ ದಿನದ ಬೆಳಗಿನ ಹೊತ್ತು ಕಂಡರು. ಬಹುದೂರದಿಂದ ವಿಹ್ವಲಗೊಂಡ ಜನರ, ಪ್ರಾಣಿಗಳ ಆರ್ತನಾದ ಕಾಡುಹಕ್ಕಿಗಳ ಚೀರುವಿಕೆಯಂತೆ ಕೇಳಿಸುತ್ತಿತ್ತು. ಎಲ್ಲ ಸಂಕಟವನ್ನೂ ಹೊತ್ತು ಗಾಳಿ ಊಳಿಟ್ಟು ಅಲೆಯುತ್ತಿತ್ತು. ನೋಡುನೋಡುತ್ತಿದ್ದಂತೆ ಗಂಗಾವಳಿ ನದಿ ಮಣ್ಣಿನಿಂದ ಮುಚ್ಚಿಹೋಯಿತು. ನದಿಯ ಅಲೆಗಳು ಆರೇಳು ಆಳೆತ್ತರಕ್ಕೆ ಪುಟಿಯುತ್ತಾ ತೆಂಗು, ಅಡಿಕೆ ಮರಗಳನ್ನು ಮೀರಿ ನೆಗೆದು, ಕೆಳಗಿಳಿದು ಹತ್ತಿರದ ಆ ಇನ್ನೊಂದು ದಡದ ಗುಡಿಸಲುಗಳನ್ನು ತಮ್ಮೊಡಲೊಳಕ್ಕೆ ಎಳೆದುಕೊಂಡವು. ಆ ಅಷ್ಟು ದೂರದಿಂದ ವಿಕಾರವಾಗಿ ಅಳುತ್ತಾ ಸಣ್ಣ ದೊಡ್ಡ ಹಕ್ಕಿಗಳು ಕಾಡಮೂಲೆಯ ಗುಡ್ಡದ ಮರಗಳಲ್ಲಿ ಆಸರೆ ಪಡೆದವು. ಅವುಗಳ ರೋದನ ಎಷ್ಟೋ ಹೊತ್ತು ಮುಂದುವರಿದೇ ಇತ್ತು.

ಈ ಭೀಕರ ಸನ್ನಿವೇಶಕ್ಕೆ ಅಂದು ಕಾಡಮೂಲೆ ಹಳ್ಳಿಯ ಎಲ್ಲರೂ ಸಾಕ್ಷಿಯಾಗಿದ್ದರು. ಈ ಎತ್ತರದ ಗುಡ್ಡೆಯ ಊರಿಗೆ ಲೋಕವ್ಯಾಪಾರದ ಬಿಸಿ ಬೇಗುದಿ ತಗುಲುವುದು ಅಪರೂಪ. ಅಂದು ಅಬ್ಬೆ ಹೊತ್ತುರಿವ ಬೆಂಕಿಯಂತೆ ಕ್ರುದ್ಧಳಾಗಿದ್ದಳು. 'ಮಾಣಿ, ಮನುಷ್ಯರ ಅವಸ್ಥೆ ನೋಡು, ದೇವರು ಕೊಟ್ಟಿದ್ದನ್ನು ಸರಿಯಾಗಿ ಇಟ್ಟುಕೊಳ್ಳಲು ಬರದವರು ನಾವು, ಕೊಟ್ಟ ದೇವರು ಕೊಂಡು ಒಯ್ದರೆ ಈಗ ಕುಟ್ಟಿಕೊಂಡು ಅಳುವುದ್ಯಾಕೆ?' ಎಂದಳು. ಅವಳ ಕೊನೆಯ ಸಾಲು ದಾಸರ ಹಾಡಿನಲ್ಲಿ ಕೇಳಿದಂತಿದೆ. ಈಗ ಅವಳ ಒಡಲ ಕಾವಿನಲ್ಲಿ ಅದು ಮತ್ತೆ ಬೆಂದು ಬಂದಹಾಗಿತ್ತು. ವಟಗುಟ್ಟುತ್ತಲೇ ಅಡುಗೆ ಮಾಡಿ ಮುಗಿಸಿದಳು.

ಕುಸಿದುದು ಶಿರೂರು ಗುಡ್ಡವೆಂದು ಅಂಕೋಲೆಗೆ ಹೋಗಿಬಂದ ಶುಕ್ರನಿಂದ ಅಂದು ಮಧ್ಯಾಹ್ನ ಖಚಿತವಾಯಿತು. ಕಾಡಮೂಲೆಯಲ್ಲಿ ನಿಂತು ಆಪತ್ತಿಗೊಳಗಾದ ದಿಕ್ಕನ್ನು ಸುಮಾರಾಗಿ ಊಹಿಸಬಹುದಾದರೂ ಆ ಜಾಗ ಯಾವುದೆಂದು ಖಚಿತವಾಗಿ ತಿಳಿಯಲಾಗಿರಲಿಲ್ಲ. ಇಲ್ಲಿ ಕೂತು ಇವರು ಕಲ್ಪಿಸಿಕೊಂಡುದಕ್ಕಿಂತಲೂ ಪರಿಸ್ಥಿತಿ ದಾರುಣವಾಗಿತ್ತು. ಶಿರೂರು ರಾಷ್ಟ್ರೀಯ ಹೆದ್ದಾರಿಗೆ ಸನಿಹದ ಹಳ್ಳಿ. ಶಿರೂರಿಗೆ ಸಣ್ಣ ವಾಣಿಜ್ಯ ಕೇಂದ್ರದ ಸ್ವರೂಪ ಬರಲು ಕಾರಣವಿತ್ತು. ಅಲ್ಲೊಂದು ಪುಟ್ಟ ಹೋಟೆಲ್. ಮನೆ ಜನರೇ ಸೇರಿ ನಡೆಸುತ್ತಿದ್ದ ಆ ಹೋಟೆಲಲ್ಲಿ 'ಮನೆಯಾಚೆಯ ಮನೆ' ಎಂಬಂಥ ಆತ್ಮೀಯತೆ ಬೆಳೆಯಲು ಆ ಜನರ ಸರಳತೆಯೂ, ಅನತಿ ದೂರದಲ್ಲಿದ್ದ ಗುಡ್ಡದ ನೀರಿನ ಚಿಕ್ಕ ಝರಿ ಪ್ರವಾಹವೂ, ಆ ಹಳ್ಳಿಯ ಸಹಜ ನಿರ್ವಿಕಾರ ಗುಣವೂ ಕಾರಣವಾಗಿರಬೇಕು. ಹೋಟೆಲ್ ನಡೆಸುತ್ತಿದ್ದ ಸಂಸಾರಕ್ಕೆ ಅದೇ ಮನೆಯೂ ಆಗಿತ್ತು.

ಅಂದು ಬೆಳಿಗ್ಗೆ ಗುಡ್ಡೆ ಕುಸಿಯಿತು. ಹಾಗಾಗುವುದೆಂದು ಯಾರು ಊಹಿಸಲು ಸಾಧ್ಯ? ಶಿರೂರು ಗುಡ್ಡ ಅಪಾಯದ ಅಂಚಿನಲ್ಲಿದೆ ಎಂಬ ಮಾತೇ ಇರಲಿಲ್ಲ ಎಂದಲ್ಲ. ಕೆಲವು ತಿಂಗಳುಗಳ ಹಿಂದೆ ಸರಕಾರಿ ಸಂಸ್ಥೆ ಗುಡ್ಡವನ್ನು ಮೆಟ್ಟಿಲು ಮೆಟ್ಟಿಲಾಗಿ ಕಡಿಯದೆ ಗೋಡೆಯ ಮಾದರಿಯಲ್ಲಿ ಕಡಿದ ಕ್ರಮ ಸರ್ವತ್ರ ಟೀಕೆಗೆ ಗುರಿಯಾಗಿತ್ತು. ಸಾಹಸಪ್ರವೃತ್ತಿಯ, ನಿತ್ಯದುಡಿಮೆಯ ಜನರು ಹತ್ತು ನಿಮಿಷ ಆ ಮಾತಾಡಿರಬಹುದು ಹೊರತೂ ನಿತ್ಯದ ಅವರ ಕೆಲಸಗಳ ನಡುವೆ ಇದಕ್ಕೆಲ್ಲ ಬಿಡುವೆಲ್ಲಿ? ಇದೀಗ ಯಾರ ಮಾತಿಗೂ ಕಾಯದೇ ಅನಾಹುತ ಬಂದೆರಗಿತ್ತು. ಅನಿಲ ಟ್ಯಾಂಕರ್ ಮಣ್ಣಿನ ರಾಶಿಯ ಒತ್ತಡಕ್ಕೊಳಗಾಗಿ ಗಂಗಾವಳಿ ನದಿಯತ್ತ ನುಗ್ಗಿ ರೈಲ್ವೆ ಸೇತುವೆಗೆ ಢಿಕ್ಕಿ ಹೊಡೆಯಿತಂತೆ. ನಂತರ ನೀರಿನ ಅಲೆಗಳ ಒತ್ತಡಕ್ಕೆ ಸಗಡಗೇರಿ ಬಳಿ ಸಾಗಿತಂತೆ. ವಾಸ್ತವಿಕವಾಗಿ ಈ ಗುಡ್ಡಗಳ ಬುಡದಲ್ಲಿ ಬಂಡೆಗಲ್ಲುಗಳಿಲ್ಲವಾದುದರಿಂದ ಅವು ಅಷ್ಟು ಭದ್ರವಲ್ಲ. ಸತತ ಸುರಿದ ಮಳೆ ನೆಲದ ಆಳದವರೆಗೂ ಹರಿದು ಮಣ್ಣು ಕುಸಿತ ಉಂಟಾಗಿರುವುದು ಸ್ಪಷ್ಟ. ಗಿಡ